ಶ್ರೀ ಎನ್.ಎಂ. ಅಡ್ಯಂತಾಯ.—ನಾನು ಅಪ್ಲಿಂಟ್ ಆಗಿಲ್ಲ. ನನಗೆ ಅವಕಾಶ ಕೊಡಿ.

ಶ್ರೀ ಆರ್. ವೆಂಕಟರಾಮಯ್ಯ.—ನನಗೆ ದಯವಿಟ್ಟು ಪರ್ಮೀಷನ್ ಕೊಡಿ.

ಅಧ್ಯಕ್ಷರು.—ರೂಲ್ಸ್ ಏನು ಹೇಳುತ್ತದೆಂದರೆ, ಪ್ರಶ್ನೋತ್ತರ ವೇಳೆ ಆದ ಮೇಲೆ...

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ತಾವು ದಿನವೂ ಅದನ್ನು ಓದುತ್ತೀರಿ. ಆದು ನಮಗೆ ಗೊತ್ತಿದೆ. ತಾವು ವಕೀಲರಾಗಿದ್ದೀರಿ. (ಗೊಂದಲ) ನ್ಯಾಯಾಲಯಗಳಲ್ಲೂ ಕೂಡಾ ಕೆಲವು ವೇಳೆ ವಿಳಂಬವಾಗಿ ಬಂದಾಗಲೂ ಕೇಸ್‌ಗಳನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಎನ್.ಎಂ. ಅಡ್ಯಂತಾಯ.—ನನ್ನ ಪ್ರಶ್ನೆಯನ್ನು ಮುಂದೂಡಲಾಗಿದೆ ಎಂದು ತಿಳಿಯಿತು. ತಾವು ನನ್ನ ಪ್ರಶ್ನೆಗೆ ಕಾಲಾವಕಾಶ ಮಾಡಿಕೊಡಬೇಕು.

(ಗೊಂದಲ)

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

೧೯೮೭–೮೮ನೇ ಸಾಲಿನಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆ ಲೈಸೆನ್ಸ್ ನೀಡಿರುವ ಬಗ್ಗೆ.

೧೫೬೭. ಶ್ರೀ ಡಿ.ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಗಣಿ ಮಂತ್ರಿ ಮತ್ತು ಭೂವಿಜ್ಞಾನ-ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭–೮೮ನೇ ಸಾಲಿನಲ್ಲಿ ಗಣಿ ಇಲಾಖೆಯಿಂದ ನೀಡಿರುವ ಲೀಸ್ ಲೈಸನ್ಸ್‌ಗಳ ಸಂಖ್ಯೆ ಎಷ್ಟು ?

ಆ) ಆದರಲ್ಲಿ ಮೈಸೂರು ಜಿಲ್ಲೆಗೆ ಎಷ್ಟು ಲೀಸ್ ಲೈಸನ್ಸ್‌ಗಳನ್ನು ನೀಡಲಾಗಿದೆ. (ಎವರ ಒದಗಿಸಂವುದಂ)

ಶ್ರೀ ರಮೇಶ್ ಸಿ. ಜಿಗಜಿಣಗಿ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು).—

ಅ)	ಕ್ವಾರಿ ಲೀಸುಗಳು	೨೪೫
	ಮೈನಿಂಗ್ ಲೀಸುಗಳು	೩೧
	ಪ್ರಾಸ್ಪೆಕ್ಟಿಂಗ್ ಲೈಸೆನ್ಸ್	೪
ಆ)	ಮೈನಿಂಗ್ ಲೀಸುಗಳು	ಇಲ್ಲ
	ಕ್ವಾರೀ ಲೀಸುಗಳು	೫
	ಕಟ್ಟಡದ ಕಲ್ಲು	೧
	ಸಮಾನ್ಯ ಮರಳು	೩
	ಇಟ್ಟಿಗೆ ಮಣ್ಣು	೧

ವಿದ್ಯುತ್ ಬಳಕೆದಾರರಿಂದ ಬರಬೇಕಾಗಿರುವ ವಿದ್ಯುತ್ ಬಾಕಿ ಮೊತ್ತ

೧೫೦೬. ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ (ಸಂಕೇಶ್ವರ್).—ಮಾನ್ಯ ರಾಜ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ವಿದ್ಯುತ್ ಬಳಕೆದಾರರಿಂದ ರೂ. ೨೫ ಸಾವಿರಕ್ಕೆ ಮೇಲ್ಪಟ್ಟ ವಿದ್ಯುತ್ ಬಾಕಿ ಕೊಡಬೇಕಾಗಿರುವವರ ಹೆಸರುಗಳೇನು ?